ಕಾರಣವಾಗಿ ಅಥವಾ ಶೀನಿ ಮಾವ ಹೇಳಿದ ಮಾತುಗಳೇ ಹೆಚ್ಚು ಪ್ರಾಮುಖ್ಯತೆ ಪಡೆಯಿತು ಅನ್ನುವಂತೆ ಮದುವೆಗೆ ಒಪ್ಪಿಕೊಂಡಿದ್ದಳು ಪ್ರಭಾವತಿ. ತೀರಾ ಮಿಜಿಮಿಜಿ ಮಾಡುವ ಪರಿಸ್ಥಿತಿಯೂ ತೌರಿನಲ್ಲಿರಲಿಲ್ಲವಲ್ಲ? ಆಗೇ ಹೋಗಿತ್ತು ಮದುವೆ. ಮುಂದೆ ಎರಡು ವರ್ಷಕ್ಕೆ ಮಗ ರಾಮಕೃಷ್ಣ ಹುಟ್ಟಿ...

"ಚೂರು ಈ ಕಡೆ ತಿರುಗಿ ಕೂತ್ಗಳಿ ಅಮ್ಮಾ..." ಅಂದಳು ಗುಲಾಬಿ, ಬದಿಬದಿಗೆ ಮದರಂಗಿ ಹಚ್ಚಲು. ಅವಳು ಹೇಳಿದಂತೆ ಒಂದು ಬದಿಗೆ ತಿರುಗಿ ಕೂತು, ಕಣ್ಣ ನೇರದಲ್ಲಿ ಕಾಣುತ್ತಿದೆ ಮದರಂಗಿ ಗಿಡ. ಈ ಮನೆಯಲ್ಲಿ ಏನೆಲ್ಲಾ ರಾದ್ಧಾಂತ ನಡೆದು ಹೋಗಿದ್ದರೂ ತನಗೂ, ಅದಕ್ಕೂ ಸಂಬಂಧವಿಲ್ಲದಂತೆ ನಿಸೂರಾಗಿ ನಿಂತಿದೆ. ನವವಧುವಾಗಿ ಈ ಮನೆಗೆ ಕಾಲಿಟ್ಟಾಗ ಮದುವೆ ಹೊತ್ತಿಗೆ ಗಂಟಿಕ್ಕಿಕೊಂಡಿದ್ದ ಹುಬ್ಬು ನೇರವಾಗಿ, ಕಣ್ಣುಗಳು ಅರಳಿ ಬಿರಿದಿದ್ದವು. ಅಪ್ಪಯ್ಯ ಹೇಳಿದ್ದು ನಿಜ. ನಿಂತ ಮೆಟ್ಟಿಗೆ ತೆಗೆದು ಹಾಕುವಂತಹ ಕುಳ ಅಲ್ಲ ಶ್ರೀಪಾದ. ಹಳೆಗಾಲದ ದೊಡ್ಡ ಮನೆ, ಹಿತ್ತಲು, ತೋಟ, ಗದ್ದೆ ಯಾವುದರಲ್ಲೂ ಬೆರಳು ಮಡಚುವಂತಿಲ್ಲ. ಈ ಎಲ್ಲದರ ಒಡತಿ ಇನ್ನು ಮುಂದೆ ತಾನು. ತಾನೇ. ಬೇಕೂಬೇಡದಂತೆ ಹಸೆಮಣೆ ಮೇಲೆ ಕೂತಿದ್ದವಳು ಬಲಗಾಲಿಟ್ಟು ಗಂಡನ ಮನೆಯ ಹೊಸಿಲು ದಾಟಿದ್ದೇ ಚಿಮ್ಮುವ ಚಿಗರೆಯಂತಾಗಿದ್ದನ್ನು ಕಂಡು ಅಕ್ಕ ಕೀಟಲೆ ಮಾಡಿದ್ದಳು,

"ಏನೇ, ತಲೇಮೇಲೆ ಕೋಡು ಬಂತನೇ? ಬೇಡ ಅಂದಿದ್ಯಲ್ಲ, ಈಗ ನೋಡು..."

★★★

ಮನೆಯ ಹಿತ್ತಲಲ್ಲಿ ಒಂದು ಮದರಂಗಿ ಗಿಡ ನೆಡಬೇಕೆಂದು ಪ್ರಭಾವತಿ ನಿಶ್ಚೈಸಿಕೊಂಡಿದ್ದು ಮದುವೆಯಾದ ಹೊಸದರಲ್ಲೇ. ಮಾವು, ಹಲಸು, ಚಿಕ್ಕು, ಪಪ್ಪಾಯಿ ಏನೆಲ್ಲಾ ಹಣ್ಣಿನ ಗಿಡಗಳು, ಹಾಗಲ, ಹೀರೆ, ತೊಂಡೆ, ಬೆಂಡೆ ಎಷ್ಟೆಲ್ಲಾ ತರಕಾರಿ ಗಿಡಗಳು, ಆದರೂ ಒಂದು ಮದರಂಗಿ ಗಿಡ ಬೇಕೆಂದು ಹಂಬಲಿಸಿದ್ದು ತೌರಿನ ನೆನವರಿಕೆಯನ್ನು ಜೀವಂತವಾಗಿರಿಸಲೆಂದೋ ಅಥವಾ ಅದರ ಕುರಿತಾದ ವಿಪರೀತದ ವ್ಯಾಮೋಹದಿಂದಲೋ? ಚಿಕ್ಕವಳಾಗಿದ್ದಾಗಿನಿಂದ ಅದೊಂದು ಚಪಲ. ನುಣ್ಣಗೆ ಅರೆದ ಎಲೆಗಳಿಗೆ ಲಿಂಬೆರಸ, ನೀಲಗಿರಿ ಎಣ್ಣೆ ಮುಂತಾದ್ದನ್ನು ಬೆರೆಸಿ ಕೈಕಾಲುಗಳ ಮೇಲೆ ವಿವಿಧ ರೀತಿಯ ಚಿತ್ತಾರ ಮೂಡಿಸಿಕೊಳ್ಳುವ ಹುಚ್ಚು. ವರ್ಷಕ್ಕೆ ಕನಿಷ್ಠ ನಾಲ್ಕು ಬಾರಿಯಾದರೂ ನಡೆಯುತ್ತಿತ್ತು ಈ ಕಲಾಪ. 'ಕೆಲಸಕ್ಕೆ ಕಳ್ಳತಪ್ಪಿಸಿಕೊಳ್ಳೋಕೆ ಇದೊಂದು ಹೆಳೆ' ಅಕ್ಕ ಬಾಯಲ್ಲಿ ಬೈದರೂ ತಂಗಿಯ ಆಸೆಗೆ ನೀರೆರೆದು ಬೆಳೆಸಿದ್ದಳು. ಪ್ರಭಾವತಿ ಹೇಳಿಹೇಳಿದಂತೆ ಅವಳ ಅಂಗೈ ಮುಂಗೈಗಳ ಮೇಲೆ ಹಸೆ ಬರೆದು ಅವಳ ಹುಚ್ಚು ತಣಿಸುತ್ತಿದ್ದಳು. 'ಒಂದು ಮದರಂಗಿ ಗಿಡ, ಒಂದು ಮದರಂಗಿ ಗಿಡ' ಎಂದು ಹಲವರಿಯುತ್ತಿದ್ದವಳ ಹಂಬಲ ಪೂರೈಸಿದ್ದು ಶೀನಿ ಮಾವ. ಒಂದು ಸಸಿ ತಂದು ಹಿತ್ತಲಲ್ಲಿ ಸೂಕ್ತ ಜಾಗ ನೋಡಿ ನೆಟ್ಟು ಕೊಟ್ಟಿದ್ದ. ಸೋದರಸೊಸೆಯ ಮನೆಗೆ ಹಾಜರಿ ಹಾಕಿದಾಗಲೆಲ್ಲಾ, 'ಏನನ್ನುತ್ತೆ ಮದರಂಗಿ ಗಿಡ...' ಎನ್ನುತ್ತಾ ಹಿತ್ತಲಿಗೆ ಹೋಗಿ ಕಣ್ಣು ಹಾಯಿಸಿ ಬರುತ್ತಿದ್ದ. ಕೊನೆಗೂ ಇದೇ ಮದರಂಗಿ ಗಿಡ ತನ್ನ ಭವಿಷ್ಯ ಬರೆಯುವ ವಿಧಾತನ ಸ್ಥಾನದಲ್ಲಿ ನಿಲ್ಲುತ್ತದೆಯೆಂದು ಕನಸಲ್ಲಾದರೂ ಕಲ್ಪಿಸಿದ್ದಿತ್ತೇ? ತಾನೆಂದುಕೊಂಡಿರುವುದು ಒಮ್ಮೊಮ್ಮೆ ಹೌದು ಅನಿಸುತ್ತಾ, ಒಮ್ಮೊಮ್ಮೆ ಭ್ರಮೆ ಅನಿಸುತ್ತಾ ಮನಸ್ಸು ಗೀರುವ ಕನವರಿಕೆಗಳು.

★★★

ಶ್ರೀಪಾದ ಒಳ್ಳೆಯವನಲ್ಲವೆಂದು ಅವನ ವೈರಿ ಕೂಡಾ ಬೆಟ್ಟು ಮಾಡುವಂತಿಲ್ಲ, ಅಂಥ ಸಜ್ಜನ ಶ್ರೀಪಾದ. 'ತನಗೆ ಒಳ್ಳೇ ಗಂಡ ಸಿಕ್ಕಿದ್ದಾನೆ' ಎಂದು ಪ್ರಭಾವತಿ ತನ್ನನ್ನು ತಾನು ನಂಬಿಸಿಕೊಳ್ಳಲೆತ್ನಿಸಿದಾಗಲೆಲ್ಲಾ ಅದ್ಯಾವುದೋ ಕಿರುದನಿ ಅವಳ ಸಮರ್ಥನೆಯನ್ನು ಅಲ್ಲಗಳೆಯುತ್ತಾ ಅವಳನ್ನು ದ್ವಂದ್ವಕ್ಕೆ ನೂಕುತ್ತಿತ್ತು. ಇಷ್ಟಕ್ಕೂ ಒಳ್ಳೆಯ ಗಂಡ ಅಂದರೆ ಯಾರು? ಹೇಗಿರುತ್ತಾನೆ?